## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ವ ಶಿಕ್ಷಾ ಅಭಿಯಾನ ಸಮಿತಿ ಕರ್ನಾಟಕ ಇದರ ರಾಜ್ಯಯೋಜನಾ ನಿರ್ದೇಶಕರನ್ನು ನೇಮಿಸಿ ಈಗಾಗಲೇ ರಾಜ್ಯದಲ್ಲಿ ಅಂತ್ಯಗೊಂಡಿರುವ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ(ಡಿ.ಪಿ.ಇ.ಪಿ)ವನ್ನು ಸರ್ವಶಿಕ್ಷಾಅಭಿಯಾನದಡಿ ವಿಲೀನಗೊಳಿಸುವಕುರಿತು.

ಓದಲಾಗಿದೆ:- 1. ಸರ್ಕಾರಿ ಆದೇಶ ಸಂಖ್ಯೆ:ಇಡಿ:207:ಎಂಸಿಡಿ 95:ದಿನಾಂಕ:4.10.1997.

2. ಸರ್ಕಾರಿ ಆದೇಶ ಸಂಖ್ಯೆ:ಇಡಿ:205:ಎಂಸಿಡಿ 2001:ದಿನಾಂಕ:16.2.2001.

3. ಸರ್ಕಾರಿ ಪತ್ರದ ಸಂಖ್ಯೆ:ಇಡಿ:279:ಎಂಸಿಡಿ 2003:ದಿನಾಂಕ:30.6.2003.

4. ಕೇಂದ್ರ ಸರ್ಕಾರದ ಪ್ರಾಥಮಿಕ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆಯ ಕಾರ್ಯದರ್ಶಿಯವರ ಅ.ಸ.ಪ.ಸಂಖ್ಯೆ:ಎಫ್-2-1-/2002/ಡಿಪಿಇಪಿ-4(ಭಾಗ) ದಿನಾಂಕ:28.02.2003.ಮತ್ತು ದಿನಾಂಕ:28.03.2003.

****

ಪ್ರಸ್ತಾವನೆ:-

ಮೇಲೆ(1)ರಲ್ಲಿ ಓದಲಾದ ದಿನಾಂಕ 4.10.1997ರ ಸರ್ಕಾರಿ ಆದೇಶದಲ್ಲಿ ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿಪಿಇಪಿ)ದ ಎರಡನೆಯ ಹಂತದ ಅನುಷ್ಠಾನಕ್ಕೆ ಮಂಜೂರಾತಿ ನೀಡಲಾಯಿತು. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು 30.6.2003ಕ್ಕೆ ಅಂತ್ಯಗೊಂಡಿರುತ್ತದೆ.

ಈ ಮಧ್ಯೆ ಮೇಲೆ(2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿ ಅಂದು ಅನುಷ್ಠಾನಗೊಳ್ಳುತ್ತಿದ್ದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ಜಾರಿಯಲ್ಲಿ ಇಲ್ಲದಿದ್ದ 11ಜಿಲ್ಲೆಗಳಲ್ಲಿ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾದ ಸರ್ವಶಿಕ್ಷಾಅಭಿಯಾನದಡಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲುಸರ್ಕಾರದ ಅನುಮೋದನೆ ನೀಡಲಾಯಿತು ಮತ್ತು ಈ ಕಾರ್ಯಕ್ರಮಗಳನ್ನು 2001-02ನೇ ಸಾಲಿನಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೆ ಒಳಪಟ್ಟು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಸರ್ವಶಿಕ್ಷಾ ಅಭಿಯಾನ ಸಮಿತಿ-ಕರ್ನಾಟಕ ಇದಕ್ಕೆ ವಹಿಸಲಾಯಿತು.

ಮೇಲೆ(3)ರಲ್ಲಿ ಓದಲಾದ ದಿನಾಂಕ:30.6.2003ರ ಸರ್ಕಾರದಪತ್ರದಲ್ಲಿ ಡಿ.ಪಿ.ಇ.ಪಿ ಯೋಜನೆಯು 30.6.2003ರಂದು ಅಂತ್ಯಗೊಳ್ಳುವುದರಿಂದ ತಾತ್ಕಾಲಿಕ ವ್ಯವಸ್ಥೆಯಾಗಿ ಔಪಚಾರಿಕ ಸರ್ಕಾರಿ ಆದೇಶವನ್ನು ಕಾಯ್ದಿರಿಸಿ ಡಿ.ಪಿ.ಇ.ಪಿಯೋಜನೆಯಡಿಯಲ್ಲಿ ರಾಜ್ಯ ಕಾರ್ಯಾಲಯ, ಜಿಲ್ಲಾ ಮತ್ತು ತಾಲ್ಲೂಕು ಕಾರ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಖಾಯಂ/ಗುತ್ತಿಗೆ ಸಿಬ್ಬಂದಿವರ್ಗದವರನ್ನು01.7.2003ರಿಂದ ಅನ್ವಯವಾಗುವಂತೆ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಪರಿಗಣಿಸುವುದು ಮತ್ತು ಅವರುಗಳ ವೇತನ ಭತ್ಯೆ ಮತ್ತು ಇತರೆ ವೆಚ್ಚಗಳನ್ನು ಕೆಲವು ಷರತ್ತುಗಳಿಗೊಳಪಡಿಸಲು, 30.6.2003ರಲ್ಲಿದ್ದ ದರಗಳಲ್ಲಿ ಎಸ್.ಎಸ್.ಎ ಅಡಿಯಲ್ಲಿ ನೀಡಲು

ಅನುಮೋದನೆ ನೀಡಲಾಗಿದೆ. ಡಿ.ಪಿ.ಇ.ಪಿ ಕಾರ್ಯಕ್ರಮಗಳಡಿಯ ವೆಚ್ಚ ಬಾಬ್ತುಗ. ಹಾಗೂ ಲೆಕ್ಕ ಪತ್ರಗಳ ಇತ್ಯರ್ಥ ಪೂರ್ಣಗೊಂಡು ಕಛೇರಿ ಮುಕ್ತಾಯಗೊಳಿಸಲು ಮುಂದಿನ ಎರಡು ತಿಂಗಳುಗಳು ಪ್ರಸಕ್ತ ಕಾರ್ಯಾಲಯದಲ್ಲೇ ಮುಂದುವರೆದು ಆ ವೆಚ್ಚವನ್ನು ಎಸ್.ಎಸ್.ಎ ಅಡಿಯಲ್ಲೇ ಭರಿಸ ಬಹುದು. ಡಿ.ಪಿ.ಇ.ಪಿಯು ಮುಕ್ತಾಯ ಗೊಂಡ ನಂತರ ಡಿ.ಪಿ.ಇ.ಪಿ ಅಡಿಯಲ್ಲಿ ಸೃಜಿಸಿದ ಸಮಸ್ತ ಆಸ್ತಿಗಳನ್ನು (ವಾಹನ, ಕಂಪ್ಯೂಟರ್ ಗಳು, ಖಾಯಂಫಿಕ್ಚರ್ಸ್‌ಗಳು, ಪೀಠೋಪಕರಣಗಳು ಇತ್ಯಾದಿ) ಎಸ್.ಎಸ್.ಎಗೆ ವರ್ಗಾಯಿಸಬೇಕು. ಅಗತ್ಯವಿರುವೆಡೆಗೆ ಇವುಗಳನ್ನು ಅಭಿಯೋಜನೆ ಮಾಡಲು ಸಾರ್ವಜನಿಕ ಶಿಕ್ಷಣ ಆಯುಕ್ತರು ಕ್ರಮ ಕೈಗೊಳ್ಳುವರು.

ಮೇಲೆ(4)ರಲ್ಲಿ ಓದಲಾದ ತಮ್ಮ ದಿನಾಂಕ:28.2.2003ರ ಪತ್ರದಲ್ಲಿ ಕೇಂದ್ರ ಸರ್ಕಾರದ ಕಾರ್ಯದರ್ಶಿಯವರು ಡಿ.ಪಿ.ಇ.ಪಿ ಮತ್ತು ಎಸ್.ಎಸ್.ಎ ಕಾರ್ಯಕ್ರಮಗಳ ಅನುಷ್ಠಾನವನ್ನು ರಾಜ್ಯದಲ್ಲಿ ಈಗಿರುವ ಎರಡು ಪ್ರತ್ಯೇಕ ಸೊಸೈಟಿಗಳ ಬದಲಿಗೆ ಒಂದೇ ಸೊಸೈಟಿಯಡಿಯಲ್ಲಿ ನಿರ್ವಹಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ ಈ ಕುರಿತು ಶೀಘ್ರ ನಿರ್ಣಯ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಮುಂದುವರೆದಂತೆ ತಮ್ಮ ದಿನಾಂಕ:25.3.2003ರ ಅ.ಸ.ಪತ್ರದಲ್ಲಿ ಸರ್ವ ಶಿಕ್ಷಾ ಅಭಿಯಾನ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಗಮನದಲ್ಲಿರಿಸಿಕೊಂಡು ಅದರ ಪರಿಣಾಮಕಾರಿ ಅನುಷ್ಠಾನದ ಹಿತದೃಷ್ಟಿ ಯಿಂದ ಸರ್ವ ಶಿಕ್ಷಾ ಅಭಿಯಾನ ಸಮಿತಿಯ ರಾಜ್ಯ ಯೋಜನಾ ನಿರ್ದೇಶಕರ ಹುದ್ದೆಗೆ ಹಿರಿಯ ಐ.ಎ.ಎಸ್.ಅಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಶೀಘ್ರವಾಗಿ ಪರಿಗಣಿಸಲು ಸೂಚಿಸಿರುತ್ತಾರೆ.

ಡಿ.ಪಿ.ಇ.ಪಿ ಕಾರ್ಯಕ್ರಮವು ಮುಕ್ತಾಯಗೊಂಡಿದ್ದು, ಅದರಡಿಯಲ್ಲಿ ಮೊದಲನೆಯ ಮತ್ತು ಎರಡನೆಯ ಹಂತದಲ್ಲಿ ಸೃಜಿಸಲಾದ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಹುದ್ದೆಗಳನ್ನು ಮತ್ತು ಅದರಡಿಯಲ್ಲಿ ಸೃಜನೆಯಾದ ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಹಾಗೂ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳ ಸಿಬ್ಬಂದಿಯನ್ನು ರಾಜ್ಯವಲಯ ಯೋಜನೆಯಡಿಯಲ್ಲಿ ಮುಂದುವರೆಸ ಬೇಕಾಗಿದೆ. ಡಿ.ಪಿ.ಇ.ಪಿ ಕಾರ್ಯಕ್ರಮವು ಅಂತ್ಯಗೊಂಡಿರುವುದರಿಂದ ಅದರಡಿ ಕಾರ್ಯ ನಿರ್ವಹಿಸುತ್ತಿದ್ದ ಖಾಯಂ/ತಾತ್ಕಾಲಿಕ ಸಿಬ್ಬಂದಿವರ್ಗದವರನ್ನು ಮುಂದುವರೆಸುವ/ ವರ್ಗಾಯಿಸುವ/ಕೈಬಿಡುವ ಅಂಶಗಳನ್ನು ಮತ್ತು ಎಸ್.ಎಸ್.ಎ ಅಡಿಯಲ್ಲಿ ಸೃಜಿಸಲಾದ ಹುದ್ದೆಗಳನ್ನು ಮರುಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳುವ ವಿಚಾರವನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ:279:ಎಂ.ಸಿ.ಡಿ2003, ಬೆಂಗಳೂರು, ದಿ.:27-10-2003

[ಇಡಿ:146:ಸ್ಕೀಮರ 2003(ಯೂನಿಕ್), ದಿ.:27-10-2003)

ಸರ್ವ ಶಿಕ್ಷಾ ಅಭಿಯಾನ ಸಮಿತಿ ಕರ್ನಾಟಕ ಇದರ ರಾಜ್ಯ ಯೋಜನೆ ನಿರ್ದೇಶಕರಾಗಿ ಈಗ ನಿಗದಿಯಾಗಿರುವ ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಹಾಗೂ ಪದನಿಮಿತ್ತ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ಬದಲಿಗೆ ಐ.ಎ.ಎಸ್

ಗಳನ್ನು ನೇಮಿಸುವ ಸಲುವಾಗಿ ಹುದ್ದೆಯ [illegible] ನಿಯಮಾನುಸಾರ ತುಂಬಲು ಅನುಮತಿ ನೀಡಲಾಗಿದೆ.

ಡಿ.ಪಿ.ಇ.ಪಿ ಕಾರ್ಯಕ್ರಮವು 30.06.2003ರಂದು ಮುಕ್ತಾಯಗೊಂಡಿದ್ದು ಡಿ.ಪಿ.ಇ.ಪಿ ಸೊಸೈಟಿಯನ್ನು ಸರ್ವ ಶಿಕ್ಷಾ ಅಭಿಯಾನ ಸಮಿತಿಯಡಿ ವಿಲೀನಗೊಳಿಸಲು ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಾ ಅಭಿಯಾನ ಸಮಿತಿ, ಕರ್ನಾಟಕ ಇವರು ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು. ಎರಡೂ ಸೊಸೈಟಿಗಳಲ್ಲಿನ ಹುದ್ದೆಗಳನ್ನು ಗಮನಕ್ಕೆ ತೆಗೆದುಕೊಂಡು ಅಂತಿಮವಾಗಿ ಎಸ್.ಎಸ್.ಎ ಅಡಿಯಲ್ಲಿ ರಾಜ್ಯ ಕಾರ್ಯಾಲಯಕ್ಕೆ ಈ ಕೆಳಕಂಡ ಹುದ್ದೆಗಳನ್ನು ನಿಗದಿಪಡಿಸಲಾಗಿದೆ.

| ಕ್ರ. ಸಂ | ಹುದ್ದೆಯ ವಿವರ | ಎಸ್.ಎಸ್.ಎ ಅಡಿಯಲ್ಲಿ ಹುದ್ದೆಗಳ ಸಂಖ್ಯೆ |
|---|---|---|
| 01. | ರಾಜ್ಯ ಯೋಜನಾ ನಿರ್ದೇಶಕರು | 1 |
| 02. | ನಿರ್ದೇಶಕರು(ಕಾರ್ಯಕ್ರಮಗಳು) | 1 |
| 03. | ಸಹ ನಿರ್ದೇಶಕರು | 2 |
| 04. | ಹಿರಿಯ ಕಾರ್ಯಕ್ರಮ ಅಧಿಕಾರಿಗಳು | 3 |
| 05. | ಮುಖ್ಯ ಲೆಕ್ಕಾಧಿಕಾರಿಗಳು | [illegible] |
| 06. | ಕಾರ್ಯಕ್ರಮಾಧಿಕಾರಿಗಳು | 4 |
| 07. | ಕಿರಿಯ ಕಾರ್ಯಕ್ರಮಾಧಿಕಾರಿಗಳು | 4 |
| 08. | ತಾಂತ್ರಿಕಸಹಾಯಕರು(ಪ್ರಾಥಮಿಕ-1,ಶಾಲಾಶಿಕ್ಷಕರು,ಪ್ರೌಢಶಾಲಾಶಿಕ್ಷಕರು-3) | 4 |
| 09. | ಸಿಸ್ಟಂ ಅನಲಿಸ್ಟ್ | 1 |
| 10. | ಕಂಪ್ಯೂಟರ್ ಪ್ರೋಗ್ರಾಮರ್‌ಗಳು | 2 |
| 11. | ಡಾಟಾ ಎಂಟ್ರಿ ಆಪರೇಟರ್‌ಗಳು/ ಸಿಸಿಟಿ | 6 |
| 12. | ಲೆಕ್ಕಪತ್ರ ಅಧೀಕ್ಷಕರು | 2 |
| 13. | ಮ್ಯಾನೇಜರ್ | 1 |
| 14. | ಅಧೀಕ್ಷಕರು | 1 |
| 15. | ಎಕ್ಸಿಕ್ಯೂಟಿವ್ ಇಂಜಿನಿಯರ್ | 1 |
| 16. | ಎಫ್.ಡಿ.ಎ | 5 |
| 17. | ಸ್ಟೆನೋಗ್ರಾಫರ್ | 2 |
| 18. | ಗ್ರೂಪ್.ಡಿ. | 6 |
| 19. | ವಾಹನ ಚಾಲಕರು | 4 |
| | ಒಟ್ಟು | 51 |

3.ಡಿ.ಪಿ.ಇ.ಪಿ ಅಡಿಯಲ್ಲಿ ರಾಜ್ಯ ಕಾರ್ಯಾಲಯದಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ಹೊಸದಾಗಿ ಗುತ್ತಿಗೆ ಆಧಾರದ ಮೇಲೆ ಅನ್ವಯವಾಗುವ ಹುದ್ದೆಗಳಿಗೆ ಮಾತ್ರ ಮಾಡಬಹುದಾಗಿದೆ. ಮೇಲೆ ನಮೂದಿಸಿದ ಹುದ್ದೆಗಳಿಗಿಂತ ಯಾವುದೇ ಹೆಚ್ಚುವರಿ ಹುದ್ದೆಗಳನ್ನು ಮುಂದುವರೆಸಬಾರದು.

4.ಡಿ.ಪಿ.ಇ.ಪಿ ಮತ್ತು ಸರ್ವ ಶಿಕ್ಷಾ ಅಭಿಯಾನ ಕಾರ್ಯಕ್ರಮಗಳಡಿ ಜಿಲ್ಲಾ ಮಟ್ಟದಲ್ಲಿ ಲಭ್ಯವಿದ್ದ ಹುದ್ದೆಗಳನ್ನು ಗಮನಕ್ಕೆ ತೆಗೆದುಕೊಂಡು ಜಿಲ್ಲಾ ಹಂತದಲ್ಲಿ ಏಕ ರೂಪ ಸಿಬ್ಬಂದಿ ಪ್ರವರ್ಗವನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿದೆ.

| | | |
|---|---|---|
| i. | ಜಿಲ್ಲಾ ಪ್ರಾಜೆಕ್ಟ್ ಕೋ-ಆರ್ಡಿನೇಟರ್ | 1 |
| ii | ಲೆಕ್ಕಪತ್ರ ಅಧೀಕ್ಷಕರು | 1 |
| iii | ಕಂಪ್ಯೂಟರ್ ಪ್ರೋಗ್ರಾಮರ್(ಎಂ.ಐ.ಎಸ್. ಇನ್‌ಚಾರ್ಜ್) | 1 |
| iv | ಡೇಟಾ ಎಂಟ್ರಿ ಆಪರೇಟರ್ | 2 |
| V | ಕಾರ್ಯಕ್ರಮ ಅಧಿಕಾರಿಗಳು | 2 |
| Vi | ಸಹಾಯಕ ಲಿಪಿಕ ಸಿಬ್ಬಂದಿ(ಪ್ರ.ದ.ಸಹಾಯಕ, ದ್ವಿತೀಯ ದರ್ಜೆ ಸಹಾಯಕರು) | 2 |
| vii | ಗ್ರೂಪ್-ಡಿ | 1 |
| | ಒಟ್ಟು | 10 |

5.ಡಿ.ಪಿ.ಇ.ಪಿ ಕಾರ್ಯಕ್ರಮದಡಿಯಲ್ಲಿ ಇದಕ್ಕಿಂತ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ನಿಯೋಜನೆ ಮೇಲಿನ ಸಿಬ್ಬಂದಿಯನ್ನು ಮಾತೃ ಇಲಾಖೆಗಳಿಗೆ ಬಿಡುಗಡೆ ಮಾಡುವುದು. ಡಿ.ಪಿ.ಇ.ಪಿ ಅಡಿಯಲ್ಲಿ ಕಾರ್ಯಕ್ರಮ ನಿರ್ವಹಿಸಿದ್ದು, ಈಗ ಎಸ್.ಎಸ್.ಎ ಅಡಿಯಲ್ಲಿ ಮುಂದುವರೆಸಲುದ್ದೇಶಿಸಿದ ಹುದ್ದೆಗಳಿಗೆ ಹೊಸದಾಗಿ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳತಕ್ಕದ್ದು.

6.ಮೇಲೆ ತಿಳಿಸಿದಂತೆ ಸರ್ವ ಶಿಕ್ಷ ಅಭಿಯಾನ ರಾಜ್ಯ ಕಾರ್ಯಾಲಯಕ್ಕೆ 51(ಐವತ್ತೊಂದು) ಹುದ್ದೆಗಳನ್ನು ಹಾಗೂ ರಾಜ್ಯ ಜಿಲ್ಲಾ ಮಟ್ಟದಲ್ಲಿ 10(ಹತ್ತು) ಹುದ್ದೆಗಳನ್ನು ಮಾತ್ರ ಸರ್ವ ಶಿಕ್ಷಾ ಅಭಿಯಾನ ಸೊಸೈಟಿಯಲ್ಲಿ ನೇಮಕ ಮಾಡುವುದಕ್ಕೆ ಸರ್ಕಾರವು ಅನುಮೋದಿಸಿದೆ. ಪ್ರಸ್ತಾಪಿಸಿದಂತೆ ಗುತ್ತಿಗೆ ಆಧಾರದ ನೇಮಕಾತಿ ಹೊಸದಾಗಿ ಆಗಬೇಕು. ಆಡಳಿತ ನಿರ್ವಹಣೆ ವೆಚ್ಚ ಶೇ.6ನ್ನು ಮೀರಬಾರದು ಮತ್ತು ಈ ಹುದ್ದೆಗಳ ವೇತನ ವನ್ನು ಎಸ್.ಎಸ್.ಎ.ಅಡಿಭರಿಸಬೇಕು. ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರಿಗೆ ನೂತನ ನಿಯೋಜನೆ ಆದೇಶವನ್ನು ನೀಡುವ ಷರತ್ತಿಗೊಳಪಟ್ಟಿರುತ್ತದೆ.

7. ಡಿ.ಪಿ.ಇ.ಪಿ ಕಾರ್ಯಕ್ರಮದಡಿ ಸೃಜಿಸಲಾದ ಸಕಲ ಸ್ವತ್ತುಗಳು/ಆಸ್ತಿಗಳ ಎಂದರೆ, ವಾಹನಗಳು, ಕಂಪ್ಯೂಟರ್‌ಗಳು, ಖಾಯಂ ಫಿಕ್ಚರ್ಸ್‌ಗಳು; ಪೀಠೋಪಕರಣಗಳು ಇತ್ಯಾದಿ ಎಸ್.ಎಸ್.ಎಗೆ ವರ್ಗಾಯಿಸಲು ಹಾಗೂ ಇವುಗಳನ್ನು ಅಗತ್ಯವಿರುವೆಡೆಗೆ ಅಭಿಯೋಜನೆ ಮಾಡಲು ಸಾರ್ವಜನಿಕ ಶಿಕ್ಷಣ ಆಯುಕ್ತರು ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಅ.ಟಿ.ಸಂಖ್ಯೆ:ಆಇ:884:ವೆಚ್ಚ-8/2003/ದಿ.15.10.2003. ಅಡಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ
ಅವರ ಹೆಸರಿನಲ್ಲಿ

(ಕೆ. ಶ್ರೀಕಂಠೇಶ್ವರ)
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿಗಳು(ಯೋಜನೆ)
ಶಿಕ್ಷಣ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ ಮತ್ತು ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಾ ಅಭಿಯಾನ ಸಮಿತಿ ಕರ್ನಾಟಕ, ಬೆಂಗಳೂರು.), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
8. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
9. ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣರವರ ಆಪ್ತಸಹಾಯಕರು, ಬೆಂಗಳೂರು.
10. ರಾಜ್ಯ ಯೋಜನಾ ನಿರ್ದೇಶಕರು, ಡಿ.ಪಿ.ಇ.ಪಿ, ಬೆಂಗಳೂರು.
11. ಕಛೇರಿ ಪ್ರತಿ/ರಕ್ಷಾ ಕಡತ.